ಮಾಡಬೇಕೆಂದು ಏನು ಮಾಡುತ್ತಿದ್ದೀರಿ. ಅದಕ್ಕೆ ಸಂಬಂಧಪಟ್ಟಂತೆ ಬಿಲ್ ಅನ್ನು ಈಗ ನಡೆಯುತ್ತಿರುವ ಅಧಿವೇಶನದಲ್ಲಿಯೇ ತರುತ್ತೀರೆಂದು ನಾನಂದುಕೊಂಡಿದ್ದೆ. ಈ ಅಧಿವೇಶನದಲ್ಲಿಯೇ ಅದನ್ನು ತೊಂದರೆ ಈಗಲೇ ಅದನ್ನು ಪಾಸ್ ಮಾಡಕೊಡುತ್ತೇವೆ. ಏಕೆಂದರೆ ಈ ವಿಚಾರ in the interest of the state ಆಗಿದೆ. ಆದುದರಿಂದ ಇನ್ನು ಎರಡು ದಿನಗಳಲ್ಲಿ ಆ ಬಿಲ್ ತೆಗೆದುಕೊಂಡು ಬನ್ನಿ.

ಶ್ರೀ ಡಿ.ವಿ. ಸದಾನಂದ ಗೌಡ :– ಇವತ್ತು ನೀವು ಬಜೆಟ್ ಪಾಸ್ ಮಾಡಿ. ಆದಷ್ಟು ಬೇಗ G.O. issue ಮಾಡುವಂಥ ಪ್ರಯತ್ನಗಳನ್ನು ನಾನು ಮಾಡುತ್ತೇನೆ.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಈಗ ಬಿಲ್ ತರದಿದ್ದರೂ ಈ ಸದನ ಮುಗಿದ ಮೇಲೆ ನೀವು ordiance pass ಹೊರಡಿಸಿ ನೀವು ಅದನ್ನು ತನ್ನಿ.

ಶ್ರೀ ಡಿ.ವಿ. ಸದಾನಂದ ಗೌಡ :– ಈ ಸದನ ಮುಗಿದ ತಕ್ಷಣ oridance pas ಮಾಡುತ್ತೇವೆ.

ದೇವಸ್ಥಾನಗಳ ಕಾಮಗಾರಿಗಳ ವಿವರ
38 : (247)

ಶ್ರೀ ಅಮರೇಶ್ (ಮುಳಬಾಗಿಲು)

ಅ) ಮುಜರಾಯಿ ಇಲಾಖೆಯಿಂದ 2009–10, 2010–11 ಮತ್ತು 2011–12ನೇ ಸಾಲಿನಲ್ಲಿ ನಿಗದಿಪಡಿಸಿದ ಅನುದಾನವೆಷ್ಟು (ವಿವರ ನೀಡುವುದು)

ಆ) ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿಗೆ ಈ 3 ವರ್ಷಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಹಾಗೂ ಯಾವ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ. (ವಿವರ ನೀಡುವುದು)

ಇ) ಈ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ಜಿಲ್ಲಾವಾರು) ಹಾಗೂ ತಾಲ್ಲೂಕುವಾರು ವಿವರ ನೀಡುವುದು.

ಈ) 2011–12ನೇ ಸಾಲಿನಲ್ಲಿ ಎಷ್ಟು ಹಣ ನಿಗದಿ ಮಾಡಲಾಗಿದೆ ಹಾಗೂ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ನಿಗದಿಪಡಿಸಲಾಗಿದೆ. (ವಿವರ ನೀಡುವುದು)

ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು)

ಅ) ಈ ಸಂಬಂಧ ವಿವರ ಕೆಳಕಂಡಂತಿದೆ

ವರ್ಷ	(ರೂ. ಲಕ್ಷಗಳಲ್ಲಿ)
2009–10	6901.50
2010–11	19910.70
2011–12	16612.47

ಆ) ಆ ಸಂಬಂಧ ವಿವರ ಕೆಳಕಂಡಂತಿದೆ :

ವರ್ಷ	(ರೂ.ಲಕ್ಷಗಳಲ್ಲಿ)
2009–10	35.00
2010–11	64.00
2011–12	1.20

ಕಾಮಗಾರಿಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಆ ಸಂಬಂಧ ವಿವರ ಕೆಳಕಂಡಂತಿದೆ :

ವರ್ಷ	(ರೂ.ಲಕ್ಷಗಳಲ್ಲಿ)
2009–10	7260.27
2010–11	19910.70
2011–12	16612.47

ಕಾಮಗಾರಿಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ಈ) ರೂ. 16612.47 ಲಕ್ಷ

ಕಾಮಗಾರಿಗಳ ವಿವರಗಳನ್ನು ಅನುಬಂಧ–3 ರಲ್ಲಿ ನೀಡಲಾಗಿದೆ.

ವಿಧಾನಸಭಾ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 247ಕ್ಕೆ ಅನುಬಂಧ–1
ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ದೇವಾಲಯಗಳು/ ಧಾರ್ಮಿಕ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಅನುದಾನದ ವಿವರಗಳು

ಕ್ರ.ಸಂ.	ಸಂಸ್ಥೆ ಹೆಸರು ಮತ್ತು ಗ್ರಾಮ	ತಾಲ್ಲೂಕು	ಮಂಜೂರಾದ ಮೊತ್ತ (ರೂ. ಲಕ್ಷಗಳಲ್ಲಿ)	ಕಾಮಗಾರಿಯ ವಿವರ
1	2	3	4	5
		2009–10		
1.	ಶ್ರೀ ಸೋಮೇಶ್ವರ ಸ್ವಾಮಿ ಮಹಾಗೋಪುರ	ಮುಳಬಾಗಿಲು	15.00	ಮಹಾಗೋಪುರ
2.	ಶ್ರೀ ಪ್ರಸನ್ನ ವಿಠಲನಾರಾಯಣ ಸ್ವಾಮಿ	ಮುಳಬಾಗಿಲು	5.00	ಅಭಿವೃದ್ಧಿ
3.	ಶ್ರೀ ಶ್ರೀಪಾದರಾಜ ಮಠ	ಮುಳಬಾಗಿಲು	15.00	ಯಾತ್ರಿನಿವಾಸ
	ಒಟ್ಟು		**35.00 ಲಕ್ಷ**	
		2010–11		
1.	ಶ್ರೀ ಪ್ರಸನ್ನ ಚೌಡೇಶ್ವರಿ ಅಮ್ಮನವರ ದೇವಾಲಯ, ಕೋಲದೇವಿ	ಮುಳಬಾಗಿಲು	2.00	ಅಭಿವೃದ್ಧಿ
2.	ಶ್ರೀ ಚೌಡೇಶ್ವರಿ ದೇವಾಲಯ, ಸೂರಗುಂಟೆ, ಗುಮ್ಮಕಲ್ಲು (ಪಂ)	ಮುಳಬಾಗಿಲು	2.00	ಅಭಿವೃದ್ಧಿ
3.	ಶ್ರೀ ಚೌಡೇಶ್ವರಿ ದೇವಾಲಯ ಮೋತಕಪಲ್ಲಿ ಗುಮ್ಮಕಲ್ಲಿ (ಪಂ)	ಮುಳಬಾಗಿಲು	2.00	ಅಭಿವೃದ್ಧಿ
4.	ಶ್ರೀ ಶ್ರೀಚೌಡೇಶ್ವರಿದೇವಿ ದೇವಾಲಯ, ಕಿಲಗಾಣಿ ಮತ್ತು ಮೇಲಾಗಣಿ	ಮುಳಬಾಗಿಲು	1.00	ಅಭಿವೃದ್ಧಿ
5.	ಶ್ರೀ ಗಂಗಾಭಿಕ ದೇವಾಲಯ, ದೊಡ್ಡಗುರ್ಕಿ	ಮುಳಬಾಗಿಲು	1.00	ಅಭಿವೃದ್ಧಿ
6.	ಶ್ರೀ ಮೇಘಮಲ್ಲೇಶ್ವರಮ್ಮ ದೇವಾಲಯ, ವಾನಗಾನಹಳ್ಳಿ, ದೊಡ್ಡಗುರ್ಕಿ	ಮುಳಬಾಗಿಲು	1.00	ಅಭಿವೃದ್ಧಿ

ಕ್ರ.ಸಂ.	ಸಂಸ್ಥೆ ಹೆಸರು ಮತ್ತು ಗ್ರಾಮ	ತಾಲ್ಲೂಕು	ಮಂಜೂರಾದ ಮೊತ್ತ (ರೂ. ಲಕ್ಷಗಳಲ್ಲಿ)	ಕಾಮಗಾರಿಯ ವಿವರ
1	2	3	4	5
7.	ಶ್ರೀ ಪಟ್ಟಾಲಮ್ಮನ ಸ್ವಾಮಿ ದೇವಾಲಯ	ಮುಳಬಾಗಿಲು	1.00	ಅಭಿವೃದ್ಧಿ
8.	ಶ್ರೀ ಪ್ರಸನ್ನ ಸೋಮೇಶ್ವರಸ್ವಾಮಿ, ಬೈರಕೋರು	ಮುಳಬಾಗಿಲು	5.00	ಸಮುದಾಯ ಭವನ ಅಭಿವೃದ್ಧಿ
9.	ಶ್ರೀ ಗಂಗಮ್ಮ ದೇವಾಲಯ, ಬೈರಕೋರು	ಮುಳಬಾಗಿಲು	5.00	ಅಭಿವೃದ್ಧಿ
10.	ಶ್ರೀ ಉಜ್ಜನಿರಾಯ ಸ್ವಾಮಿ ಮತ್ತು ಬೀರೇಶ್ವರ ಸ್ವಾಮಿ ದೇವಾಲಯ, ಬೈರಕೋರು	ಮುಳಬಾಗಿಲು	5.00	ಅಭಿವೃದ್ಧಿ
11.	ಶ್ರೀ ಶ್ರೀ ಕೋದಂಡರಾಮಸ್ವಾಮಿ ದೇವಾಲಯ, ಬೈರಕೋರು	ಮುಳಬಾಗಿಲು	10.00	ರಾಜಗೋಪುರ ನಿರ್ಮಾಣ
12.	ಶ್ರೀ ಸೋಮೇಶ್ವರಸ್ವಾಮಿ ದೇವಾಲಯ, ಬೈರಕೂರು	ಮುಳಬಾಗಿಲು	5.00	ಸಮುದಾಯ ಭವನ ಅಡಿಗೆ ಮನೆ ನಿರ್ಮಾಣ
13.	ಶ್ರೀ ಗುಟ್ಟೆವೆಂಕಟರಮಣಸ್ವಾಮಿ, ಬೈರಕೋರು, ಹೋ. ಎಂ. ಚಮಕಲಹಳ್ಳಿ	ಮುಳಬಾಗಿಲು	3.00	ಕಾಂಪೌಂಡ್
14.	ಶ್ರೀ ಸೋಮೇಶ್ವರಸ್ವಾಮಿ ದೇವಾಲಯ, ಬೈರಕೋರು	ಮುಳಬಾಗಿಲು	3.00	ಸಮುದಾಯ ಭವನ ಅಭಿವೃದ್ಧಿ
15.	ಶ್ರೀ ಗುಟ್ಟೆವೆಂಕಟರಮಣಸ್ವಾಮಿ, ಬೈರಕೂರು, ಹೋ.ಎಂ. ಚಮಕಲ ಹಳ್ಳಿ	ಮುಳಬಾಗಿಲು	3.00	ಕಾಂಪೌಂಡ್ ನಿರ್ಮಾಣ
16.	ಶ್ರೀ ಈಶ್ವರ ಸ್ವಾಮಿ ದೇವಾಲಯ, ಊತನೂರು ಗ್ರಾಮ	ಮುಳಬಾಗಿಲು	1.00	ಅಭಿವೃದ್ಧಿ

ಕ್ರ.ಸಂ.	ಸಂಸ್ಥೆ ಹೆಸರು ಮತ್ತು ಗ್ರಾಮ	ತಾಲ್ಲೂಕು	ಮಂಜೂರಾದ ಮೊತ್ತ (ರೂ. ಲಕ್ಷಗಳಲ್ಲಿ)	ಕಾಮಗಾರಿಯ ವಿವರ
1	2	3	4	5
17.	ಶ್ರೀ ಫಟ್ಟವೆಂಕಟರಮಣಸ್ವಾಮಿ ದೇವಾಲಯ, ಎಂ. ಚಮಕಲ ಹಳ್ಳಿ	ಮುಳಬಾಗಿಲು	5.00	ಅಭಿವೃದ್ಧಿ
18.	ಶ್ರೀ ಗಾಯತ್ರಿ ದೇವಾಲಯ ಹಾಗೂ ಸಮುದಯ ಭವನ, ವಿಠಲಕುಂಟೆ ರಸ್ತೆ	ಮುಳಬಾಗಿಲು	4.00	ಅಭಿವೃದ್ಧಿ
19.	ಶ್ರೀ ಆಂಕಾಳಮ್ಮ ದೇವಾಲಯ, ದೇವರಾಯ ಸಮುದ್ರ	ಮುಳಬಾಗಿಲು	5.00	ಅಭಿವೃದ್ಧಿ
		ಒಟ್ಟು	64.00 ಲಕ್ಷ	
		2011–12		
1	ಶ್ರೀ ಮಶ್ಯಮ್ಮ ದೇವಾಲಯ, ದೊಡ್ಡ ಗುರ್ಕಿ	ಮುಳಬಾಗಿಲು	1.20	ಅಭಿವೃದ್ಧಿ
		ಒಟ್ಟು	1..20 ಲಕ್ಷ	

ಅನುಬಂಧ–2

ರಾಜ್ಯದಲ್ಲಿನ ಧಾರ್ಮಿಕ ಸಂಸ್ಥೆಗಳಿಗೆ 2009–10ನೇ ಸಾಲಿನಲ್ಲಿ ಜೀರ್ಣೋದ್ಧಾರ / ದುರಸ್ತಿ / ನವನಿರ್ಮಾಣಗಳಿಗೆ ಮಂಜೂರು ಮಾಡಿದ ಅನುದಾನದ ವಿವರ

ಕ್ರ.ಸಂ.	ಜಿಲ್ಲೆಯ ಹೆಸರು	ಸಂಸ್ಥೆಯ ಸಂಖ್ಯೆ	ಮೊತ್ತ (ರೂ.ಲಕ್ಷಗಳಲ್ಲಿ)
1.	ಬೆಂಗಳೂರು ನಗರ	11	85.85
2.	ಬೆಂಗಳೂರು ಗ್ರಾಮಾಂತರ	3	35.80
3.	ಬಳ್ಳಾರಿ	35	142.77
4.	ಬಾಗಲಕೋಟೆ	13	507.20
5.	ವಿಜಾಪುರ	16	43.25
6.	ಬೀದರ್	9	13.30
7.	ಬೆಳಗಾವಿ	41	338.05
8.	ಚಾಮರಾಜನಗರ	12	139.05
9.	ಚಿಕ್ಕಬಳ್ಳಾಪುರ	3	3.25
10.	ಚಿಕ್ಕಮಗಳೂರು	14	201.65
11.	ಚಿತ್ರದುರ್ಗ	17	321.20
12.	ಧಾರವಾಡ	7	24.65
13.	ದಾವಣಗೆರೆ	13	221.80
14.	ದಕ್ಷಿಣ ಕನ್ನಡ	14	35.50
15.	ಗದಗ	12	66.90
16	ಗುಲ್ಬರ್ಗಾ	42	959.35
17.	ಹಾಸನ	10	18.70
18.	ಹಾವೇರಿ	18	159.10
19.	ಕೊಡಗು	21	47.50
20.	ಕೋಲಾರ	32	67.40
21	ಕೊಪ್ಪಳ	11	5.70
22	ಮಂಡ್ಯ	64	284.60
23.	ಮೈಸೂರು	17	1251.05
24	ರಾಮನಗರ	13	150.50
25	ರಾಯಚೂರು	3	5.90
26	ಶಿವಮೊಗ್ಗ	101	733.60
27	ತುಮಕೂರು	33	286.10
28	ಉಡುಪಿ	15	259.05
29	ಉತ್ತರ ಕನ್ನಡ	11	248.80
30	ಹೊರರಾಜ್ಯ	4	602.70
	ಒಟ್ಟು	**615**	**7260.27**

ರಾಜ್ಯದಲ್ಲಿನ ಧಾರ್ಮಿಕ ಸಂಸ್ಥೆಗಳಿಗೆ 2010–11ನೇ ಸಾಲಿನಲ್ಲಿ ಜೀರ್ಣೋದ್ಧಾರ / ದುರಸ್ಥಿ /

ನವನಿರ್ಮಾಣಗಳಿಗೆ ಮಂಜೂರು ಮಾಡಿದ ಆನುದಾನದ ವಿವರ

ಕ್ರ.ಸಂ.	ಜಿಲ್ಲೆಯ ಹೆಸರು	ಸಂಸ್ಥೆಯ ಸಂಖ್ಯೆ	ಮೊತ್ತ (ರೂ.ಲಕ್ಷಗಳಲ್ಲಿ)
1.	ಬೆಂಗಳೂರು ನಗರ	70	811.50
2.	ಬೆಂಗಳೂರು ಗ್ರಾಮಾಂತರ	31	513.00
3.	ಬಳ್ಳಾರಿ	25	57.50
4.	ಬಾಗಲಕೋಟೆ	56	457.00
5.	ವಿಜಾಪುರ	82	282.50
6.	ಬೀದರ್	37	73.00
7.	ಬೆಳಗಾವಿ	174	800.00
8.	ಚಾಮರಾಜನಗರ	41	54.00
9.	ಚಿಕ್ಕಬಳ್ಳಾಪುರ	50	183.00
10.	ಚಿಕ್ಕಮಗಳೂರು	81	663.00
11.	ಚಿತ್ರದುರ್ಗ	61	878.00
12.	ಧಾರವಾಡ	56	501.50
13.	ದಾವಣಗೆರೆ	292	778.25
14.	ದಕ್ಷಿಣ ಕನ್ನಡ	119	793.50
15.	ಗದಗ	77	170.50
16	ಗುಲ್ಬರ್ಗಾ	132	558.75
17.	ಹಾಸನ	131	895.75
18.	ಹಾವೇರಿ	76	395.25
19.	ಕೊಡಗು	158	325.75
20.	ಕೋಲಾರ	149	324.75
21	ಕೊಪ್ಪಳ	86	254.00
22	ಮಂಡ್ಯ	142	925.00
23.	ಮೈಸೂರು	60	515.50
24	ರಾಮನಗರ	46	250.40
25	ರಾಯಚೂರು	28	59.50
26	ಶಿವಮೊಗ್ಗ	376	3191.00
27	ತುಮಕೂರು	204	1839.10
28	ಉಡುಪಿ	100	843.75
29	ಉತ್ತರ ಕನ್ನಡ	69	161.50
30.	ಯಾದಗಿರಿ	45	89.50
31	ಹೊರರಾಜ್ಯ	14	2265.00
	ಒಟ್ಟು	**3078**	**19910.75**

ರಾಜ್ಯದಲ್ಲಿನ ಧಾರ್ಮಿಕ ಸಂಸ್ಥೆಗಳಿಗೆ 2011–12ನೇ ಸಾಲಿನಲ್ಲಿ ಜೀರ್ಣೋದ್ಧಾರ /

ದುರಸ್ಥಿ / ನವನಿರ್ಮಾಣಗಳಿಗೆ ಮಂಜೂರು ಮಾಡಿದ ಆನುದಾನದ ವಿವರ

ಕ್ರ.ಸಂ.	ಜಿಲ್ಲೆಯ ಹೆಸರು	ಸಂಸ್ಥೆಯ ಸಂಖ್ಯೆ	ಮೊತ್ತ (ರೂ.ಲಕ್ಷಗಳಲ್ಲಿ)
1.	ಬೆಂಗಳೂರು ನಗರ	74	494.90
2.	ಬೆಂಗಳೂರು ಗ್ರಾಮಾಂತರ	26	148.50
3.	ಬಳ್ಳಾರಿ	219	539.30
4.	ಬಾಗಲಕೋಟೆ	36	76.40
5.	ವಿಜಾಪುರ	99	189.28
6.	ಬೀದರ್	174	387.00
7.	ಬೆಳಗಾವಿ	139	235.55
8.	ಚಾಮರಾಜನಗರ	212	617.50
9.	ಚಿಕ್ಕಬಳ್ಳಾಪುರ	182	1592.50
10.	ಚಿಕ್ಕಮಗಳೂರು	68	115.20
11.	ಚಿತ್ರದುರ್ಗ	61	211.35
12.	ಧಾರವಾಡ	131	1483.50
13.	ದಾವಣಗೆರೆ	361	636.12
14.	ದಕ್ಷಿಣ ಕನ್ನಡ	44	454.90
15.	ಗದಗ	209	378.92
16	ಗುಲ್ಬರ್ಗಾ	88	152.90
17.	ಹಾಸನ	172	527.90
18.	ಹಾವೇರಿ	103	640.10
19.	ಕೊಡಗು	40	211.60
20.	ಕೋಲಾರ	188	182.25
21	ಕೊಪ್ಪಳ	182	344.30
22	ಮಂಡ್ಯ	101	622.70
23.	ಮೈಸೂರು	190	525.55
24	ರಾಮನಗರ	134	208.80
25	ರಾಯಚೂರು	145	224.30
26	ಶಿವಮೊಗ್ಗ	238	1933.30
27	ತುಮಕೂರು	342	1716.45
28	ಉಡುಪಿ	103	620.00
29	ಉತ್ತರ ಕನ್ನಡ	63	152.30
30	ಯಾದಗಿರಿ	61	411.60
31	ಹೊರರಾಜ್ಯ	7	577.50
	ಒಟ್ಟು	**4192**	**16612.47**

ಶ್ರೀ ಅಮರೇಶ್ :– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಅದರೆ ಇವತ್ತು ನಾವು ದೇವಸ್ಥಾನಗಳ ಬಗ್ಗೆ ವರ್ಷಾವಾರು ವಿವರಗಳನ್ನು ಕೇಳದ್ದೇವೆ. ಅದರಲ್ಲಿ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನೂ ಕೂಡ ಕೇಳಿದ್ದೇವೆ. ಆದರೆ ಅವರು ಕೊಟ್ಟಿರತಕ್ಕಂಥ ಮಾಹಿತಿ ಇವತ್ತ ಸುಮಾರು ಜಿಲ್ಲೆಗಳಲ್ಲಿ ಸರ್ಕಾರದ ನಾರ್ಮ್ಸ್ ಏನೋ ಇದೆಯೇ ನನಗೆ ಗೊತ್ತಿಲ್ಲ. ಅದರಲ್ಲಿಯೂ ಅತಿ ಹಿಂದುಳಿದ ತಾಲ್ಲೂಕು ಎಂದು ಹೇಳಿ ಕೆಲವು ತಾಲ್ಲುಕುಗಳನ್ನು ಘೋಷಣೆ ಮಾಡುತ್ತಾರೆ. ಡಾ॥ ನಂಜುಂಡಪ್ಪ ವರದಿ ಎಂದು ಒಂದು ಕಡೆ ಘೋಷಣೆ ಮಾಡುತ್ತಾರೆ. ಅತಿ ಹಿಂದುಳಿದ ತಾಲ್ಲೂಕುಗಳು ಎಂದು ಘೋಷಣೆ ಮಾಡುತ್ತಾರೆ.

ಆದರೆ ಅನುದಾನ ರಿಲೀಸ್ ಮಾಡುವಂತಹ ಸಂದರ್ಭದಲ್ಲಿ. ಯಾವ ರೀತಿ ಆಗುತ್ತದೆಂದು ಗೊತ್ತಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ತಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಇವತ್ತು ತಾವು ಕೊಟ್ಟಿರುವಂತಹ ಉತ್ತರವನ್ನು ನೋಡಿದರೆ ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಹೋಗಿದೆ ಎಂದು ಪತ್ರದ ಮುಖಾಂತರ ಸುಮಾರು ಲಕ್ಷ ಲಕ್ಷ ರೂಪಾಯಿಗಳಷ್ಟು ಬೇರೆ ಕಡೆ ಹೋಗಿದೆ. ಮಾನ್ಯ ಅಧ್ಯಕ್ಷರೆ, ನಿಮ್ಮ ಕೊಡಗು ಜಿಲ್ಲೆಗೂ ಕೊಟ್ಟಿಲ್ಲ. ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಕೊಡಿ ಎಂದು ಕೇಳಿದ್ದೇವೆ. ಆದರೆ ತಾಲ್ಲೂಕುವಾರು ವಿವರವನ್ನು ಕೊಟ್ಟಿಲ್ಲ. ಇವರು ಏಕೆ ಈ ರೀತಿ ಮಾಡುತ್ತಿದ್ದಾರೆಂದು ಅರ್ಥವಾಗುತ್ತಿಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ :– ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವಂತಹ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಡಲಾಗಿದೆ. ಮುಜರಾಯಿ ಇಲಾಖೆಯಲ್ಲಿ 2009–10, 2010–11 ಮತ್ತು 2011–12ನೇ ಸಾಲಿಗೆ ನಿಗದಿಪಡಿಸಿದಂತಹ ಅನುದಾನವೆಷ್ಟು ಎನ್ನುವ ವಿವರವನ್ನು ಪೂರ್ತಿಯಾಗಿ ಕೊಟ್ಟಿದ್ದೇವೆ. 2009–10 ರಲ್ಲಿ 69.01 ಕೋಟಿ ರೂಪಾಯಿ, 2010–11ರಲ್ಲಿ 199.10 ಕೋಟಿ ರೂಪಾಯಿ, 2011–12ನೇ ಸಾಲಿನಲ್ಲಿ 166.12 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿಗೆ ಈ ಮೂರು ವರ್ಷಗಳಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಎಂದು ಕೇಳಿದ್ದಾರೆ. ಅದರ ಬಗ್ಗೆ ಅನುಬಂಧದಲ್ಲಿ ಮಾಹಿತಿಯನ್ನು ಸರಿಯಾಗಿ ಕೊಡಲಾಗಿದೆ. ಈ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಾವ್ಯಾವ ಕಾಮಗಾರಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಬೇಕೆಂದು ಕೇಳಿದ್ದಾರೆ. ಇದು ಬಹಳ ದೊಡ್ಡ ಪಟ್ಟಿ ಇದೆ. ಆದರೂ ಕೂಡ ಕ್ಷೇತ್ರಕ್ಕೆ ಸಂಬಂಧಪಟ್ಟ ವಿವರಗಳನ್ನು ಒದಗಿಸಿಕೊಡುವಂತಹ ಕೆಲಸ ಕಾರ್ಯಗಳನ್ನು ಮಾಡಲಾಗಿದೆ. ನಮಗೆಲ್ಲ

ಗೊತ್ತಿರುವಂತಹ ಸಂಗತಿ. ಇದು ಭಾವಾನಾತ್ಮಕವಾದ ವಿಚಾರಕ್ಕೆ ಸಂಬಂಧಪಟ್ಟಂತಹ ಪ್ರಶ್ನೆಗಳು. ಸಾಧಾರಣವಾಗಿ ಹಲವಾರು ಭಾಗಗಳಲ್ಲಿ ದೇವರ ಮೇಲೆ, ಸತ್ಯದ ಮೇಲೆ, ಧರ್ಮದ ಮೇಲೆ ವಿಶ್ವಾಸವಿರುವಂತಹ ಜನ ಹೆಚ್ಚೆಚ್ಚು ಆ ಭಾಗದಲ್ಲಿ ದೇವಾಲಯಗಳು, ಧಾರ್ಮಿಕ ಕೇಂದ್ರಗಳಾದ ಚರ್ಚ್ ಅಥವಾ ಮಸೀದಿ ಇರಬಹುದು. ಇದರಲ್ಲಿ ಕೆಲಸಗಳಾಗುತ್ತವೆ ಎಂದು ಭಾವನೆಗಳಿರುವಂತಹ ಶಾಸಕರುಗಳು ಬಂದು ನಮ್ಮ ಭಾಗದಲ್ಲಿ ಈ ರೀತಿ ಇದ್ದರೆ ನಾವೆಲ್ಲ ಒಟ್ಟಾಗಿ, ಒಂದಾಗಿ ಇರುತ್ತೇವೆ. ಎಲ್ಲರ ಭಾವನೆಗಳಿಗೆ ತಕ್ಕಂತೆ ಒಂದು ಒಳ್ಳೆಯ ಕೆಲಸ ಮಾಡಿ ಕೊಟ್ಟಂತಾಗುತ್ತದೆಂದು ಅವರ ಬೇಡಿಕೆಗಳು ಬರುತ್ತವೆ. ಆ ಬೇಡಿಕೆಗಳಿಗೆ ನಾವು ಸ್ಪಂದನ ಮಾಡುತ್ತಿದ್ದೇವೆ. ನಾನು ಮಾನ್ಯ ಅಮರೇಶ್‌ರವರಿಗೆ ಇಷ್ಟು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಮ್ಮ ಭಾಗದಲ್ಲಿ ಯಾವುದಾದರೂ ಬಾಕಿಯಿದ್ದರೆ ಬನ್ನಿ. ನಿಮಗೆ ಖಂಡಿತವಾಗಿ ಕೊಡೋಣ. ನೀವೂ ಕೂಡ ಧರ್ಮಾಧಾರಿತವಾದಂತಹ ವ್ಯವಸ್ಥೆಯಲ್ಲಿ ಹೆಚ್ಚೆಚ್ಚು ಜೋಡಣೆ ಮಾಡಿಕೊಳ್ಳುವಂತಹ ಕೆಲಸಕ್ಕೆ ಅನುಗುಣವಾಗಿ ಎಲ್ಲ ಸಹಕಾರ ಕೊಡುವುದಕ್ಕೆ ಸಿದ್ಧರಿದ್ದೇವೆ, ಕೊಡುತ್ತೇವೆ.

ಶ್ರೀ ಅಮರೇಶ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಹಳ ಜಾಣತನದಿಂದ ಉತ್ತರ ಕೊಟ್ಟಿದ್ದಾರೆ. ನಾನು ಹೇಳುವುದಿಷ್ಟೆ. 360 ಹಳ್ಳಿಗಳಲ್ಲಿ ನಾವು ತಿರುಪತಿಗೆ ಹೋಗಬೇಕೆಂದರೆ ಮುಳಬಾಗಿಲು ಮಾರ್ಗವಾಗಿ ಹೋಗಬೇಕಾಗುತ್ತದೆ. ಇವತ್ತು ಹೊರರಾಜ್ಯಕ್ಕೆ ಸುಮಾರು ಹಣವನ್ನು ಕೊಟ್ಟಿರುದ್ದಾರೆ. ಆದರೆ ನನ್ನ ತಾಲ್ಲೂಕಿಗೆ ಹೆಚ್ಚಿಗೆ ಅನುದಾನವನ್ನು ಕೊಡುವ ಬಗ್ಗೆ ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತೆ ಹೇಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು :– ಅವರು ಕೊಡುತ್ತೇನೆಂದು ಹೇಳಿದ್ದಾರಲ್ಲ.

ಶ್ರೀ ಡಿ.ಎ. ಸದಾನಂದಗೌಡ :– ಕೊಡುತ್ತೇನೆ.

ಅಧ್ಯಕ್ಷರು :– ಈಗ ವಸಂತ ಬಂಗೇರರವರು ಕೇಳಿ, ಅವರು ಇಲ್ಲ. ಗೂಳಿಹಟ್ಟಿ ಶೇಖರ್‌ರವರು ಕೇಳಿ.

ಪ್ರಶ್ನೆಯ ಸಂಖ್ಯೆ : 280

ಶ್ರೀ ವಸಂತ ಬಂಗೇರ ಕೆ.

(ಮಾನ್ಯ ಸದಸ್ಯರು ಗೈರುಹಾಜರಿದ್ದರು)